ಬಹು ಬೆಲೆಯ ಒಂದು ಕಾರ್ ಬಡವೇಶ್ಯೆಯರ ವಸತಿ ವಠಾರದಲ್ಲಿ ಬೆಳಗಿನ ಸಮಯ ಬಂದು ನಿಂತಾಗ ನೋಡಿದ ಜನರಿಗೆಲ್ಲ ಆಶ್ಚರ್ಯವಾಯಿತು. ಈ ಕಾರನ್ನು ನೋಡಿದ ಹುಡುಗಿಯರು ಕೆಲವರು ಬಾಲ್ಕನಿಯಲ್ಲಿ, ಬಾಗಿಲಲ್ಲಿ ಬಂದು ನಿಂತುಕೊಂಡರು. ಕೆಲವರು ಗಡಬಡಿಸಿ ಮುಖಕ್ಕೆ ಪೌಡರ್ ಮೆತ್ತಿಕೊಂಡರು.

ಕಾರ್ ಬಂದು ನಿಂತಲ್ಲಿಯೇ ಕುಂಟ ನಥುರಾಮ ನಿಂತಿದ್ದ. ಕಾರಿನಲ್ಲಿದ್ದವನೊಬ್ಬ 'ಈ ಕುಂಟ ಗಿರಾಕಿಗಳನ್ನು ಹುಡುಕಲು ನಿಂತಿರಬೇಕು' ಅಂದ. ಡೈರೆಕ್ಟರ್‌ರು ನಥುರಾಮನನ್ನು ಕರೆದು 'ನಮಗೊಂದು ತರುಣ ವೇಶ್ಯೆ ಬೇಕು' ಎಂದ.

ನಥುರಾಮ ಉತ್ಸಾಹದಿಂದ ಹೇಳಿದ:

'ಓ ಅದ್ಕೇನಂತೆ, ಹೈಸ್ಕೂಲು ಸ್ಟೂಡೆಂಟ್ ಬೇಕಾ, ಕಾಲೇಜ್ ಸ್ಟೂಡೆಂಟ್ ಬೇಕಾ? ಹೌಸ್ ವೈಫ್ ಬೇಕಾ, ಸಾದಾ ಹೆಣ್ಣು ಸಾಕಾ? ಹೇಳಿ, ಒಂದೇ ಒಂದು ರೌಂಡಿಗೆ ಬೇಕಾ, ಪೂರ್ತಿ ದಿನ ಬೇಕಾ?'

ಕಾರಿನೊಳಗಿದ್ದವನೊಬ್ಬ ಗದರುತ್ತ 'ಏಯ್ ಎಬಡಾ, ಬಾಯಿಗೆ ಬಂದದ್ದು ಒದರಬೇಡ. ಕೈಯಲ್ಲಿ ಪುಸ್ತಕ ಹಿಡಿದ ಮಾತ್ರಕ್ಕೇ ಕಾಲೇಜ್ ಹುಡುಗಿಯಾಗ್ತಾರೆಯೆ?'

ಅವನು ಸುಮ್ಮನೆ ನಕ್ಕಂತೆ ಮಾಡಿದ. ಡೈರೆಕ್ಟರ್ ಅವನನ್ನು ತಡೆದ. ನಥುರಾಮನತ್ತ ನೋಡಿ 'ಫಿಲ್ಮಿನಲ್ಲಿ ಕೆಲಸ ಮಾಡಲು ನಮಗೊಬ್ಬ ತರುಣಿ ಬೇಕು. ಒಳ್ಳೆಯ ಹೈಟ್ ಇರುವ, ಸ್ವಲ್ಪ ಓದಿಕೊಂಡೋಳು. ತುಂಬ ಚೆಂದದ ಹುಡುಗಿ ಬೇಕೆಂದೇನಿಲ್ಲ' ಅಂದ.

ಫಿಲ್ಮ್ ಅಂದಾಕ್ಷಣ ನಥುರಾಮ ರೋಮಾಂಚಿತನಾದ. ಅರೆಕ್ಷಣ ಅವನು ತನ್ನ ಒಂದೂವರೆ ಕಾಲುಗಳಲ್ಲಿ ಕುಣಿದ. ಅವನು ತಕ್ಷಣ, 'ಹಾಂ ಇದ್ದಾಳೆ ಒಬ್ಬಳು, ಉದ್ದಕೆ, ತೆಳ್ಳಗಿದ್ದಾಳೆ. ನಾನು ಅವಳನ್ನು ಕಾಲೇಜ್ ಗರ್ಲ್ ಅಂತ ಗಿರಾಕಿಗಳಿಗೆ ಪರಿಚಯಿಸ್ತೀನಿ, ಅವಳ ಹೆಸರು ನಾರಾಯಣಿ'.

ಕಾರಿನಲ್ಲಿ ಕುಳಿತವನಿಗೆ ಆ ಹೆಸರು ಅದೂ ಆ ವಠಾದಲ್ಲಿ ಕೇಳಿ ಆಶ್ಚರ್ಯವಾಯಿತು. ನಥುರಾಮನ ಕಾರಿನಲ್ಲಿ ಕುಳಿತುಕೊಂಡು ದಾರಿ ತೋರಿಸುತ್ತ ನಾರಾಯಣಿಯ ಮನೆಯ ಮುಂದೆ ನಿಲ್ಲಿಸಿದ. ಕಾರ್ ನಿಂತ ಕೂಡಲೇ ಐದಾರು ವೇಶ್ಯೆಯರು ದಬದಬಿಸಿ ಹೊರಗೆ ಬಂದು ನಿಂತುಕೊಂಡರು. ಕಾರಿನ ಹತ್ತಿರ ನಿಂತ ವೇಶ್ಯೆಯರ ಮುಖದಲ್ಲಿ ನನ್ನನ್ನು ಆಯ್ಕೆ ಮಾಡಿ, ನನ್ನನ್ನು ಆಯ್ಕೆ ಮಾಡಿ ಎಂಬ ಭಾವ ಮೂಡಿತ್ತು. ಗಟ್ಟಿಮುಟ್ಟಾದ ಮೂವರು ಗಂಡಸರು ಕಾರಿನಿಂದ ಇಳಿದರು. ಅವರಿಗೆ ಈ ವಠಾರದ ಪರಿಚಯವಿದ್ದಂತಿತ್ತು. ನಥುರಾಮ ಕೊಂಚ ಗಡುಸಾಗಿ ಹೇಳಿದ: 'ಸ್ವಲ್ಪ ಸರ್ಕೊಳ್ಳಿ, ಸರ್ಕೊಳ್ಳಿ. ನಾನು ಇವರನ್ನು ನಾರಾಯಿಣಿ ಮನೆಗೆ ಕರ್ಕೊಂಬಂದಿದ್ದೀನಿ.'

ಅಲ್ಲಿ ನಿಂತವರಲ್ಲಿ ಒಬ್ಬಳು ಹೇಳಿದಳು:

'ಈವತ್ತು ದಂಧೆಗೆ ಅವಳು ಸಿಗೋಲ್ಲ . ಈವತ್ತು ಅವಳಿಗೆ ರೆಸ್ಟ್... ಅವಳಿಗೆ ಹುಷಾರಿಲ್ಲ.'

'ದಂಧೆ ಅಲ್ವಮ್ಮ, ಇವ್ರು ಫಿಲ್ಮ್ ಮಾಡೋ ಮಂದಿ ನಾರಾಯಣಿಯನ್ನು ಫಿಲ್ಮಿಗೆ ಸೇರಿಸಿಕೊಳ್ಳೋಕೆ ಬಂದಿದ್ದಾರೆ, ಇವರನ್ನು ನಾನೇ ಕರ್ಕೊಂಬಂದಿದ್ದೀನಿ' ಎಂದ ನಥುರಾಮ.

ಅವನ ಮಾತು ಕೇಳಿ ಅಲ್ಲಿ ನಿಂತವರ ಹೃದಯ ಬಡಿತ ಹೆಚ್ಚಾಯಿತು. ಒಬ್ಬಳಂತೂ 'ಅಯ್ಯೋ' ಅಂದಳು. ಇನ್ನೊಬ್ಬಳು 'ಇಶ್' ಅಂತ ಮೂಗು ಮುರಿದಳು. ಕೆಲವರ ಕಪೋಲ ರಂಗೇರಿತು. ಕೆಲವರ ಬಾಯಿಯಲ್ಲಿ ನೀರೂರಿತು.

ಒಬ್ಬಳು 'ಇವರಲ್ಲಿ ಯಾರೊ ಒಬ್ಬರು ಮುಂಚೆ ಬಂದು ನಾರಾಯಣಿಯೊಂದಿಗೆ ಮಲಗಿ ಹೋಗಿರ್ಬೇಕು. ಅವಳ ಅಂಗಾಂಗ ಅವನಿಗೆ ಮೆಚ್ಚಿಗೆಯಾಗಿರ್ಬೇಕು'; ಮುಂದೆ ಅವಳು ಹೊಟ್ಟೆಯುರಿಯಿಂದಲೇ ಮಾತು ಮುಂದುವರಿಸುತ್ತ, 'ನಾರಾಯಣಿ ಇಲ್ಲಿ ಬಂದು ಏಳು